O.S. NO. 42/2019

DW – 2 .

Dated 01–04–2025

ಸಾಕ್ಷಿಯನ್ನು ಈ ದಿನ ದಿನಾಂಕ 01–04–2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿಯರ ಪರ ವಕೀಲರಿಂದಃ

ಪ್ರಸ್ತುತ ದಾವೆಯಲ್ಲಿ ನಾನು ಪ್ರತಿವಾದಿಗೆ ಹೊಲ ಖರೀದಿ ಕೊಟ್ಟ ಬಗ್ಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುತ್ತದೆ. ನಾನು ವಕೀಲರು ತಾರೀಖು ಇದೆ ಸಾಕ್ಷಿ ನುಡಿಯಲು ಬಾ ಎಂದು ಹೇಳಿದ್ದರಿಂದ ಬಂದಿರುತ್ತೇನೆ. ಪ್ರಸ್ತುತ ದಾವೆಯನ್ನು ಅಜ್ಜನ ಮೊಮ್ಮಗ ಖೊಟ್ಟಿ ಖರೀದಿ ಮಾಡಿದ್ದಾರೆ ಎಂದು ಹಾಕಿರುತ್ತಾರೆ. ಖರೀದಿ ಮಾಡಿದ ಪ್ರತಿವಾದಿ ನನ್ನ ಸಂಬಂಧಿಕನಲ್ಲ. ಪರಿಚಯಸ್ಥರು ಮಾತ್ರ ಇರುತ್ತಾರೆ. ನಾನು ಅವರ ಪಕ್ಷಗಾರನಾಗಿರಲಿಲ್ಲ ಆದರೆ ಅವರು ಪರಿಚಯ ಇದ್ದಾರೆ. ಹಿರಿತನಕ್ಕೆ ಪ್ರತಿವಾದಿ ನನಗೆ ಕರೆದಿದ್ದರು ಆಗ ಹೋಗಿರುತ್ತೇನೆ. ಈ ತರಹದ ಹಿರಿತನ ಹೆಚ್ಚು ಕಡಿಮೆ 5–6 ಮಾಡಿರುತ್ತೇನೆ. 85 ವರ್ಷದ ವೃದ್ದನ ಜೊತೆ ವ್ಯವಹಾರ ಮಾಡುವಾಗ ಅವರ ಜೊತೆ ಯಾರು ಯಾರು ಬಂದಿದ್ದರು ಎಂದು ಚೌಕಾಶಿ ಮಾಡಿರುತ್ತೇನೆ. ಅಜ್ಜನ ಪರವಾಗಿ 2–3 ಜನ ಬಂದಿದ್ದರು. ಅವರ ಹೆಸರು ನಾನು ಕೇಳಿ ತಿಳಿದುಕೊಂಡಿಲ್ಲ. ಸದರಿ 3 ಜನ 40 ವರ್ಷದ ವಯಸ್ಸಿನ ಒಳಗಿನವರು ಇದ್ದರು. ಸದರಿ ಅಜ್ಜನ ಜೊತೆ ಬಂದ 3 ಜನ ವ್ಯಕ್ತಿಗಳು ಖರೀದಿ ಪತ್ರದಲ್ಲಿ ಸಹಿ ವಗೈರೆ ಮಾಡಿರುವುದಿಲ್ಲ. ಸದರಿ ವೃದ್ದನ ಪರವಾಗಿ ಬಂದ 3 ಜನರಲ್ಲಿ ಯಾರಾದರೂ ಸಹಿ ಮಾಡಿ ಎಂದು ನಾನು

O.S. NO. 42/2019
DW – 2 .
Dated 01–04–2025

ಕೇಳಿಲ್ಲ. ನಾನು ಹೇಳುತ್ತಿರುವಂತೆ 3 ಜನ ಅಜ್ಜನ ಪರವಾಗಿ ಬಂದಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಎರಡು ಸರ್ವೆ ನಂಬರದಲ್ಲಿ 4 ಎಕರೆ 18 ಗುಂಟೆ ಇದೆ. ಅದು ಕಿತ್ತೂರ ತಾಲೂಕಿನ ನಾಯಿ ತೆಗೂರ ಗ್ರಾಮದಲ್ಲಿ ಇರುತ್ತದೆ. ದಾವಾ ಆಸ್ತಿಗಳ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು 6 ವರ್ಷಗಳ ಕಾಲ ಗತಿಸಿದ ನಂತರ ನನಗೆ ನೆನಪಿಲ್ಲ ಎಂದು ಪುನಃ ನುಡಿದಿರುತ್ತಾರೆ. ಸದರಿ ಮಾರಾಟ ಮಾಡಿದ ಅಜ್ಜನ ಕುಟುಂಬದ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಕಾನೂನು ಬದ್ದ ಅಡಚಣೆ ಎಂದರೆ ಅವರ ಕುಟುಂಬದ ಹಣಕಾಸಿನ ಅವಶ್ಯಕತೆ ಎಂದು ಅರ್ಥವಾಗುತ್ತದೆ. ಸದರಿ ಮಾರಾಟಗಾರನ ಮಕ್ಕಳ ಮದುವೆಗಾಗಿ ಮಾಡಿದ ಸಾಲದ ಕುರಿತು ಹಣಕಾಸಿನ ಅಡಚಣೆ ಇತ್ತು ಎಂದು ಗೊತ್ತಾಗಿರುತ್ತದೆ. ಈ ರೀತಿ ನನಗೆ ಮಾರಾಟಗಾರ ಯಾವತ್ತು ಹೇಳಿಲ್ಲ, ಸದರಿ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಮಾರಾಟಕ್ಕೆ ಇದೇ ಅಂತ ಶಿವಾನಂದ ದೂಪದಾಳ ಸಾ. ಕುಗಲಗಿ ಗ್ರಾಮದವರ ಮೂಲಕ ಗೊತ್ತಾಗಿರುತ್ತದೆ. ನಾನು ಸದರಿ ಖರೀದಿ ವ್ಯವಹಾರದಲ್ಲಿ 2 ಸಲ ಭಾಗವಹಿಸಿದ್ದೇನು. ಸದರಿ 2 ಸಲ ಭಾಗವಹಿಸಿದ ತಾರೀಖು 23–01–2019 ಮತ್ತು 24–01–2019 ಇರುತ್ತದೆ. ಸಾಕ್ಷಿ ಮುಂದುವರೆದು ದಿನಾಂಕ 23–01–2019 ರಂದು ಖರೀದಿ ಪತ್ರ ತಯಾರಿಸಿ ಸಬ ರಜಿಸ್ಟರ ಕಚೆರಿಯಲ್ಲಿ ಕೊಟ್ಟಿದ್ದು ಇರುತ್ತದೆ. ಮಾರನೇ ದಿನ

O.S. NO. 42/2019

DW - 2 .

Dated 01-04-2025

24-01-2019 ರಂದು ಖರೀದಿ ಬಾಬತ್ತು ಹಣ ರಂದು ಕೊಟ್ಟಿರುತ್ತೇವೆ. ಖರೀದಿ ಹಣವನ್ನು ಪ್ರತಿವಾದಿ ಮರಿಯಪ್ಪ ಹಂಚಿನಮನಿಯವರು ಕಲ್ಯಾಣಪ್ಪ ಕುರುಬರ ರವರ ಕೈಯಲ್ಲಿ ಕೊಟ್ಟಿರುತ್ತಾರೆ. ಸದರಿ ಹಣ ಕೊಡುವಾಗ ಸಮಯ ಮದ್ಯಾಹ್ನ 2-30 ಗಂಟೆ ಆಗಿರುತ್ತದೆ . ಸದರಿ ನಗದು ಹಣ ರೂ. 500/- ಮುಖಬೆಲೆಯ ನೊಟುಗಳು ಇದ್ದವು. ಖರೀದಿ ಬಾಬತ್ತು ಒಟ್ಟು ಹಣ ರೂ. 13 ಲಕ್ಷ 50 ಸಾವಿರ ಇದ್ದವು. ಸದರಿ ಹಣವನ್ನು ಕರಿ ಬ್ಯಾಗನಲ್ಲಿ ತುಂಬಿಕೊಂಡು ತಂದಿದ್ದರು. ಕಲ್ಯಾಣಪ್ಪ ಕುರುಬರರವರ ಪರವಾಗಿ ಹಣ ಎನಿಸಿಕೊಳ್ಳಲು ಅವರ ಜೊತೆ ಬಂದ ಇಬ್ಬರು ಜನ ಇದ್ದರು. ಸದರಿ ಹಣ ಕೊಡುವ ವ್ಯವಹಾರ ಸಬ ರಜಿಸ್ಟರ ಕಚೇರಿಯಲ್ಲಿ ಆಗಿರುತ್ತದೆ. ಕಲ್ಯಾಣಪ್ಪ ಕುರುಬರ ರವರಿಗೆ ಪ್ರತಿವಾದಿ ಸದರಿ ಹಣ ಕೊಟ್ಟಿದ್ದಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಖರೀದಿ ಕಾಗದ ನನ್ನ ಸಮಕ್ಷಮ ಆಗಿರುತ್ತದೆ. ಅದನ್ನು ಸಬ ರಜಿಸ್ಟರ ಕಚೇರಿಯಲ್ಲಿ ಆಗಿರುತ್ತದೆ. ಸದರಿ ಖರೀದಿ ಪತ್ರ ವನ್ನು ಗಡಿಬಿಡಿ ವಕೀಲರು ತಯಾರಿಸಿರುತ್ತಾರೆ. ನನಗೆ ಖರೀದಿ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿ ಮಾತು ಕೇಳಿ ಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ವ್ಯವಹಾರದಲ್ಲಿ ಭಾಗವಹಿಸದೇ ಇದ್ದರೂ ಪ್ರತಿವಾದಿ ಮಾತು ಕೇಳಿಕೊಂಡು ಸಹ ಭಾಗವಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

O.S. NO. 42/2019
DW – 2 .
Dated 01–04–2025

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕೀಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.